ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ, ಜಿನೇ ಮಾರ್ಚ್ ೧೯೯೧ ಫಾಲ್ಗುಣ ೧೪, ಶಕ ೧೯೧೪

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೧೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಹರಪನಹಳ್ಳಿ ತಾಲ್ಲೂಕಿನಲ್ಲಿ ವಿದ್ಯುತ್ ನಿಲುಗಳ ಬಗ್ಗೆ

665 - ಶ್ರೀ ಬಿ. ಹೆಚ್. ಯಂಕಾನಾಯಕ್ (ಹರಪ್ಪನಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ಪದೇ ಪದೇ ವಿದ್ಯುತ್ ನಿಲುಗಡೆ ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಇದರಿಂದ ರೈತರ ಪಂಪುಸೆಟ್ಟು ಮತ್ತು ಮಿನಿ ವಾಟರ್ ಸ್ಕೀಂಗೆ ತೊಂದರೆಯಾಗುತ್ತಿರುವುದು ನಿಜವೇ?

ಆ) ಹಾಗಿದ್ದಲ್ಲಿ, ವಿದ್ಯುತ್ ನಿಲುಗಡೆ ಆಗದಂತೆ ನೋಡಿಕೊಳ್ಳಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಗಮನಕ್ಕೆ ಬಂದಿದೆ.

ಆ) ಈಗ ಹಂಪನಹಳ್ಳಿ ಉಪ ವಿದ್ಯುತ್ ಕೇಂದ್ರಕ್ಕೆ ಮುನಿರಾಬಾದ್‌ನಿಂದ ವಿದ್ಯುತ್ ಸರಬರಾಜಿನ ವ್ಯವಸ್ಥೆ ಮಾಡಿರುವುದರಿಂದ ಸ್ವಲ್ಪ ಸುಧಾರಣೆ ಆಗಿದೆ. ಅಲ್ಲದೆ ಹರಪನಹಳ್ಳಿ ತಾಲ್ಲೂಕಿನ ತೇಲ್ಗಿ ಮತ್ತು ಪುನಬಘಟ್ಟಗಳಲ್ಲಿ ಹೊಸ 66 ಕೆ.ವಿ. ಉಪ ವಿದ್ಯುತ್ ಕೇಂದ್ರಗಳನ್ನು ನಿರ್ಮಿಸಲು ಯೋಜಿಸಿದ್ದು, ಇದರ ಕಾಮಗಾರಿಗಳು ನಡೆಯುತ್ತಿವೆ. ಈ ಉಪ ವಿದ್ಯುತ್ ಕೇಂದ್ರಗಳು ಕಾರ್ಯಾರಂಭ ಮಾಡಿದ ಮೇಲೆ ಹಂಪನಹಳ್ಳಿ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ಸ್ಥಿತಿ ಸಾಕಷ್ಟು ಸುಧಾರಿಸುವುದು.

ಅಲ್ಲದೆ, ಹರಪನಹಳ್ಳಿಯಲ್ಲಿರುವ 66:11 ಕೆ.ವಿ. ಉಪ ವಿದ್ಯುತ್ ಕೇಂದ್ರಕ್ಕೆ ಅಧಿಕ ಹೊರೆ (ಓವರ್ ಲೋಡ್)ಯಾಗುತ್ತಿರುವುದರಿಂದ ಈ ಉಪ ವಿದ್ಯುತ್ ಕೇಂದ್ರದ ಸಾಮರ್ಥ್ಯವನ್ನು ಹೆಚ್ಚಿಸಲು ಕ್ರಮ ಕೈಗೊಂಡಿದೆ. ಮತ್ತು ವಿದ್ಯುದ್ಬಲದ (ವೋಲ್ಟೇಜ್) ಮಟ್ಟವನ್ನು ಉತ್ತಮಗೊಳಿಸಲು ಈ ಉಪ ವಿದ್ಯುತ್ ಕೇಂದ್ರದಲ್ಲಿ ಕೆಪಾಸಿಟರ್ ಬ್ಯಾಂಕನ್ನು ಅಳವಡಿಸಲು ಉದ್ದೇಶಿಸಿದೆ.

ಶ್ರೀ ಬಿ.ಹೆಚ್. ಯಂಕಾನಾಯಕ್: ಮಾನ್ಯ ಅಧ್ಯಕ್ಷರೆ, ಹರಪನಹಳ್ಳಿ ತಾಲ್ಲೂಕಿನಲ್ಲಿ ಕರೆಂಟ್ ಇಲ್ಲದೆ ರೈತರ ಪಂಪ್‌ಸೆಟ್ಟಿಗೆ, ದಿನಬಳಕೆಗೆ ಬಹಳ ತೊಂದರೆಯಾಗಿದೆ. ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು

ಆದೇಶ ಮಾಡಿದರು. ಆದರೆ ಇವತ್ತಿನವರೆಗೂ ಕರೆಂಟ್ ಇಲ್ಲದೆ ಪಂಪ್‌ಸೆಟ್ ನಡೆಯುವ ಹಾಗೆ ಇಲ್ಲ ಜೊತೆಗೆ ಕುಡಿಯುವ ನೀರಿಗೆ ತೊಂದರೆಯಾಗಿದೆ. ಉತ್ತರದಲ್ಲಿ ಉಪ ವಿದ್ಯುತ್ ಕೇಂದ್ರವನ್ನು ಸುಧಾರಣೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಅಲ್ಲಿಯವರೆಗೆ ಜನರಿಗೆ ಕುಡಿಯುವುದಕ್ಕೆ ನೀರು ಇಲ್ಲ ಆ ಸಮಸ್ಯೆಯನ್ನು ಪರಿಹಾರ ಮಾಡುವುದು ಮಾನ್ಯ ಮುಖ್ಯಮಂತ್ರಿಗಳಿಗೆ ಬಿಟ್ಟಿದ್ದು. ಮೊನ್ನೆ 27ನೇ ತಾರೀಖು ನೂರಾರು ಜನ ಕುಡಿಯುವುದಕ್ಕೆ ನೀರು ಇಲ್ಲ. ಅದಕ್ಕೆ ವ್ಯವಸ್ಥೆ ಮಾಡಿ ಎಂದು ಫೋರಾವ್ ಮಾಡಿದರು. ಆಮೇಲೆ ರೈತರು ಶೇಂಗಾ ಬೆಳೆಗಳನ್ನು ಹಾಕಿದ್ದಾರೆ. ಅವುಗಳೆಲ್ಲಾ ನೀರಿಲ್ಲದೆ ಒಣಗಿ ಹೋಗಿವೆ. ವಿದ್ಯುತ್ ನಿಲುಗಡೆಯಾಗುತ್ತಿರುವುದರಿಂದ ರೈತರಿಗೆ ತೊಂದರೆಯಾಗಿರತಕ್ಕಂಥಾದ್ದು ಸರಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಸೂಕ್ತ ಗಮನ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ತೊಂದರೆಯಾಗಿರತಕ್ಕಂಥಾದ್ದು ಸರಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದೆ. ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನೂ ಕೂಡ ಒಪ್ಪುತ್ತೇನೆ. ಹರಪನಹಳ್ಳಿ ವಿದ್ಯುತ್ ಕೇಂದ್ರಕ್ಕೆ ಮುನಿರಾಬಾದಿನಿಂದ ವಿದ್ಯುತ್ ಸರಬರಾಜು ಆಗಬೇಕು. ಹರಪನಹಳ್ಳಿಯ ತೇಲಗಿ, ಪುನಬಘಟ್ಟಗಳಲ್ಲಿ 66 ಕೆ. ವಿ. ಉಪ ವಿದ್ಯುತ್ ಕೇಂದ್ರಗಳನ್ನು ನಿರ್ಮಿಸತಕ್ಕಂತಹ ಕೆಲಸ ಮಾಡಬೇಕೆಂದು ಯೋಚನೆ ಮಾಡಿ ಇದರ ಕಾಮಗಾರಿ ಕೆಲಸಗಳು ಈಗಾಗಲೇ ನಡೆಯುತ್ತಿವೆ. ಇದಾದ ಮೇಲೆ ಪರಿಸ್ಥಿತಿ ಸ್ವಲ್ಪ ಸುಧಾರಣೆಯಾಗಬಹುದು. ಈ ಕೆಲಸವನ್ನು ಆದಷ್ಟು ಬೇಗ ಮುಗಿಸುವುದಕ್ಕೆ ಆದೇಶ ಕೊಟ್ಟಿದ್ದೇನೆ. ಅಲ್ಲದೆ ಹರಪನಹಳ್ಳಿಯಲ್ಲಿರುವ 66.11 ಕೆವಿ ಉಪ ವಿದ್ಯುತ್ ಕೇಂದ್ರಕ್ಕೆ ಓವರ್ ಲೋಡ್ ಆಗುತ್ತಿರುವುದಂದ ಇದಕ್ಕೆ ಕೆಪಾಸಿಟರ್ ಬ್ಯಾಂಕನ್ನು ಜೋಡಿಸಿ ಅದನ್ನು ಸರಿಪಡಿಸಬೇಕೆಂದು ಈಗಾಗಲೇ ಆದೇಶ ಕೊಟ್ಟಿದ್ದೇನೆ. ಇದರ ಬಗ್ಗೆ ಕೆಲಸವನ್ನು ಕೈಗೊಂಡು ಆದಷ್ಟು ಬೇಗನೆ ಸರಿಪಡಿಸುತ್ತೇವೆ.

ಶ್ರೀ ಬಿ,ಹೆಚ್. ಯಂಕಾನಾಯಕ್: ಆದಷ್ಟು ಬೇಗ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿ ಕೊಡಬೇಕು ಎಂದು ಇನ್ನೊಂದು ಸಲ ಮನವಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಜನರಿಗೆ ಬಹಳ ತೊಂದರೆ ಇದೆ. ದಿವಸಕ್ಕೆ ತಾಸು ಕರೆಂಟ್ ಇರುವುದಿಲ್ಲ. ಅಧಿಕಾರಿಗಳಿಗೆ ತಕ್ಷಣ ಆದೇಶ ಕೊಟ್ಟು ರೈತರ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

(ಉತ್ತರ ಇಲ್ಲ)

ಮೈಸೂರು ಹಾಗೂ ಬೆಂಗಳೂರಿನಲ್ಲಿ ವಿದ್ಯುತ್ ನಿಲುಗಡೆ ಮಾಡುತ್ತಿರುವುದು

233 - ಶ್ರೀ ಕೆ. ಹರ್ಷಕುಮಾರ್ (ಚಾಮರಾಜ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಹಾಗೂ ಬೆಂಗಳೂರು ನಗರದಲ್ಲಿ ಪ್ರತಿನಿತ್ಯ ಕೆ.ಇ.ಬಿ.ಯವರು ಸಂಜೆ 7.15 ರಿಂದ 7.30ರವರೆಗೆ ವಿದ್ಯುಚ್ಛಕ್ತಿ ನಿಲುಗಡೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದರಿಂದ ಸಾರ್ವಜನಿರಕರಿಗೆ ಪ್ರತಿನಿತ್ಯ ಆಗುತ್ತಿರುವ ಕಿರುಕಳವನ್ನು ತಪ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು;

ಇ) ವಿದ್ಯುಚ್ಛಕ್ತಿ ನಿಲುಗಡೆಯ ಸಮಯದಲ್ಲಿ ಆಗುವ ಕಳ್ಳತನ ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮವೇನು?